ಪಿ. ಡಬ್ಲ್ಯೂ ಃ 1

**<u>ಸಾಕ್ಷಿಗೆ ದಿನಾಂಕ 11.12.2025 ರಂದು ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ 1, 6 ಮತ್ತು 7 ನೇ ಪ್ರತಿವಾದಿ ಪರ ವಕೀಲರಿಂದಃ</u>**

ನಾನು ಕಾಳವಡ್ಡರಳ್ಳಿ ಗ್ರಾಮದಲ್ಲಿ 19 ವರ್ಷಗಳಿಂದ ವಾಸವಿದ್ದೇನೆ. ನನ್ನ ತಾಯಿಯ ಹೆಸರು ರಾದಮ್ಮ. 1 ನೇ ಪ್ರತಿವಾದಿ ನನ್ನ ತಂದೆ ಎಂದರೆ ಸರಿ. ನನ್ನ ತಾಯಿ ನನ್ನ ಜೊತೆಯಲ್ಲಿ ವಾಸವಿದ್ದಾರೆ. ನನ್ನ ತಾಯಿ ಸುಮಾರು 19 ವರ್ಷಗಳಿಂದ ನನ್ನ ಜೊತೆ ವಾಸವಿದ್ದರು. ಅದಕ್ಕಿಂತ ಪೂರ್ವದಲ್ಲಿ ನನ್ನ ತಾಯಿ ಕುಟುವಾಡಿಯಲ್ಲಿ ವಾಸವಿದ್ದರು. ನನ್ನ ತಾಯಿಯ ತಂದೆಯ ಊರು ಗೋಪಾಲಪುರ. ನನ್ನ ತಾಯಿ ಕುಟುವಾಡಿಯಲ್ಲಿ ವಾಸವಿದ್ದರು ಎಂದು ತೋರಿಸಲು ಆಧಾರ ಕಾರ್ಡ, ಗುರುತಿನ ಚೀಟಿ ಹಾಗೂ ರೇಶನ್ ಕಾರ್ಡ ಹಾಜರುಪಡಿಸಿರುತ್ತೇನೆ. ರೇಶನ್ ಕಾರ್ಡನಲ್ಲಿ ನನ್ನ ತಾಯಿಯ ಹೆಸರು ಮಾತ್ರ ಇರುತ್ತದೆ. 1 ನೇ ಪ್ರತಿವಾದಿಯ ತಂದೆಯ ಹೆಸರು ತಿಮ್ಮೇಗೌಡ ಎಂದರೆ ಸರಿ. ತಿಮ್ಮೇಗೌಡರವರಿಗೆ 6 ಜನ ಮಕ್ಕಳು, ಜಯಮ್ಮ, ರಾಜೇಗೌಡ, ಶೇಖರಗೌಡ, 3 ನೇ ಪ್ರತಿವಾದಿ ಗೌರಮ್ಮ, 2 ನೇ ಪ್ರತಿವಾದಿ ಸಿದ್ದರಾಮೇಗೌಡ, ಲಕ್ಷ್ಮೀ, ಜಯಮ್ಮ ಹಾಗೂ ಶೇಖರಗೌಡ ತೀರಿಕೊಂಡಿರುತ್ತಾರೆ. ಶೇಖರೇಗೌಡರವರಿಗೆ ಮದುವೆಯಾಗಿರಲಿಲ್ಲ. ಜಯಮ್ಮರವರಿಗೆ ನಾಲ್ಕು ಜನ ಮಕ್ಕಳು. ಜಯಮ್ಮರವರ ಮಕ್ಕಳನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ನನ್ನ ತಾತನ ಹೆಸರಿನಲ್ಲಿ ಕರಿಮುದ್ದನಹಳ್ಳಿ ಕುಟುವಾಡಿಯಲ್ಲಿ ಜಮೀನುಗಳಿವೆ ಸರ್ವೆ ನಂಬರ ಗೊತ್ತಿಲ್ಲ. ದಾವಾ ಸ್ವತ್ತಿನ ಸರ್ವೆ ನಂಬರ ನನಗೆ ನೆನಪಿಲ್ಲ.

1988 ರಲ್ಲಿ ನಾನು ಕುಟುವಾಡಿಯ ನನ್ನ ತಾಯಿಯ ತಂದೆಯ ಮನೆಯಲ್ಲಿ ಜನಿಸಿರುತ್ತೇನೆ. ನನ್ನ ತಾಯಿ ಹೆರಿಗೆಗೆ ಹೋದವರು ನನ್ನ ತಂದೆಯ ಮನೆಗೆ ವಾಪಸ್ಸು ಬಂದಿಲ್ಲ ಎಂದರೆ ಸರಿಯಲ್ಲ. ನನಗೆ ವರ್ಷ ಇದ್ದಾಗ ನನ್ನನ್ನು ನನ್ನ ತಂದೆಯ ಮನೆಗೆ ಕರೆದುಕೊಂಡು ಹೋಗಿದ್ದರು. ನನ್ನ ತಾಯಿ 1 ನೇ ಪ್ರತಿವಾದಿಯ ವಿರುದ್ಧ ಇದೇ ನ್ಯಾಯಾಲಯದಲ್ಲಿ ಪ್ರಕರಣ ದಾಖಲು ಮಾಡಿದ್ದರು ಎಂದರೆ ಸರಿ. ನನ್ನ ತಾಯಿ ಹಾಗೂ ನನಗೆ 1 ನೇ ಪ್ರತಿವಾದಿ ಜೀವನಾಂಶ ಕೊಡುತ್ತಿದ್ದರು ಎಂದರೆ ಸರಿ. ಇಂದಿಗೂ ಸಹ 1 ನೇ ಪ್ರತಿವಾದಿಯಿಂದ ನನ್ನ ಜೀವನಾಂಶ

ಪಡೆದುಕೊಳ್ಳುತ್ತಿದ್ದಾರೆ ಎಂದರೆ ಸಾಕ್ಷಿ ಮೊದಲು ಕೊಡುತ್ತಿದ್ದರು ಈಗ 2 ವರ್ಷಗಳಿಂದ ಕೊಡುತ್ತಿಲ್ಲ ಎಂದು ನುಡಿಯುತ್ತಾರೆ. ಸುಮಾರು 35 ವರ್ಷಗಳಿಂದ ತನ್ನ ತವರು ಮನೆಯಲ್ಲಿದ್ದಾರೆ. ನನ್ನ ತಾಯಿ ಹಾಗೂ ತಂದೆಯ ಮದುವೆಯಾಗಿ 39 ವರ್ಷಗಳಾಗಿರುತ್ತವೆ.

ನನ್ನ ತಾತ ತಿಮ್ಮೇಗೌಡ ಹಾಗೂ ಅವರ ಮಕ್ಕಳು 1 ನೇ ಪ್ರತಿವಾದಿರವರು 1985 ರಲ್ಲಿ ತಮ್ಮ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡಿದ್ದರು ಎಂದರೆ ಇರಬಹುದು. ಸದರಿ ವಿಭಾಗದಲ್ಲಿ ದಾವಾ ಐಟಂ ನಂಬರ-1, 1 ನೇ ಪ್ರತಿವಾದಿಯ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿ. ವಿಭಾಗದಲ್ಲಿ ಐಟಂ ನಂಬರ-2, 2 ನೇ ಪ್ರತಿವಾದಿಯ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿ. ದಾವಾ ಐಟಂ ನಂಬರ-5 ನ್ನು ನನ್ನ ತಾತ ತಿಮ್ಮೇಗೌಡ ಹಾಗೂ ನನ್ನ ಅಜ್ಜಿ ತಮ್ಮ ಜೀವನಕ್ಕಾಗಿ ಉಳಿಸಿಕೊಂಡಿದ್ದರು ಎಂದರೆ ಸರಿ. ದಾವಾ ಐಟಂ ನಂಬರ-5 ನ್ನು ನನ್ನ ತಾತ ತಿಮ್ಮೇಗೌಡ 1985 ರ ಹಿಂದೆ ಸಾಲ ಮಾಡಿಕೊಂಡಿದ್ದು ಸದರಿ ಸಾಲಕ್ಕಾಗಿ ಉಳಿಸಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ನನ್ನ ತಾಯಿಯ ಮನೆಯಲ್ಲಿ ಇದ್ದಿದ್ದರಿಂದ 1 ನೇ ಪ್ರತಿವಾದಿ ಹಾಗೂ ಅವರ ಸಹೋದರರ ನಡುವೆ ಏನು ವ್ಯವಹಾರ ನಡೆದಿರುತ್ತದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ ಸಾಕ್ಷಿ ನನ್ನ ಅತ್ತೆಯವರು ಹೇಳುತ್ತಿದ್ದರು ಎಂದು ನುಡಿಯುತ್ತಾರೆ. ಸದರಿ ಸಾಲವನ್ನು ತೀರಿಸಲು ದಾವಾ ಐಟಂ ನಂಬರ-3 ನ್ನು ಕೃಷ್ಣ ಎಂಬುವವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಕೃಷ್ಣರವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ಮೊಸದಿಂದ ಕ್ರಯ ಪತ್ರ ಬರೆಸಿಕೊಂಡಿರುತ್ತಾರೆ ಎಂದು ಅವರ ವಿರುದ್ಧ ಯಾವುದೇ ಕ್ರಮ ಕೈಗೊಂಡಿಲ್ಲ. 7 ನೇ ಪ್ರತಿವಾದಿ ನನ್ನ ತಂದೆಯ ಮೂರನೇ ಹೆಂಡತಿ ಎಂದರೆ ಸರಿ. 5 ಮತ್ತು 6 ನೇ ಪ್ರತಿವಾದಿಯವರು ನನ್ನ ಸಹೋದರರು ಎಂದರೆ ಸರಿ. ಐಟ ನಂಬರ-3 ನ್ನು ಖರೀದಿಸಿದ ಕೃಷ್ಣರವರು 7 ನೇ ಪ್ರತಿವಾದಿಯ ತಮ್ಮ ಎಂದರೆ ಸರಿ. ಕೃಷ್ಣರವರು ತಾವು ಖರೀದಿಸಿದ ಆಸ್ತಿಯನ್ನು 7 ನೇ ಪ್ರತಿವಾದಿಗೆ ದಾನ ಪತ್ರದ ಮೂಲಕ ಕೊಟ್ಟಿರುತ್ತಾರೆ ಎಂದರೆ ಸರಿ ಸಾಕ್ಷಿ ಮೋಸದಿಂದ ದಾನ ಪತ್ರ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಮೋಸದಿಂದ ದಾನ ಪತ್ರ ಬರೆದಿರುತ್ತಾರೆ ಎಂದುಯಾವುದೇ ಕ್ರಮ ಕೈಗೊಂಡಿಲ್ಲ. ದಾವಾ ಐಟಂ ನಂಬರ-5 ನ್ನು ನನ್ನ ತಾತಾ ಹಾಗೂ ಅಜ್ಜಿ 4 ನೇ ಪ್ರತಿವಾದಿ

ವ್ಯವಸ್ಥಾಪನ ಮೂಲಕ ಕೊಟ್ಟಿರುತ್ತಾರೆ ಎಂದರೆ ಸರಿ. ದಾವಾ ಐಟಂ ನಂಬರ-1 ನ್ನು ಹೊರತುಪಡಿಸಿ ಉಳಿದ ಆಸ್ತಿಗಳಲ್ಲಿ ನನಗೆ ಭಾಗ ಬರಬೇಕಾಗಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ-1 ನನಗೆ ಹಾಗೂ 1 ರಿಂದ 3 ನೇ ಪ್ರತಿವಾದಿಯವರಿಗೆ ಸಮನಾದ ಹಕ್ಕು ಇದೆ ಎಂದರೆ ಸರಿ. 1 ನೇ ಪ್ರತಿವಾದಿ ಸಲ್ಲಿಸಿದ ಲಿಖಿತ ಹೇಳಿಕೆಯನ್ನು ನಾನು ತಿಳಿದುಕೊಂಡಿರುತ್ತೇನೆ. ದಾವಾ ಐಟಂ ನಂಬರ-1 ರಲ್ಲಿ ಸಮನಾದ ಭಾಗ ಇದೆ ಎಂದು ಹೇಳಿರುತ್ತಾರೆ ಎಂದರೆ ಸರಿ. ದಾವಾ ಐಟಂ ನಂಬರ-5 ನ್ನು 4 ನೇ ಪ್ರತಿವಾದಿ 8 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಖರೀದಿಸಿದ ನಂತರ 8 ನೇ ಪ್ರತಿವಾದಿ ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ.

**8 ನೇ ಪ್ರತಿವಾದಿ ಪರ ವಕೀಲರು ಹಾಜರಿದ್ದು ಪಾಟೀಸವಾಲಿಗೆ ಕಾಲವಕಾಶ ಕೇಳಿದ್ದು ಕಾಲವಕಾಶ ನೀಡಲಾಯಿತು.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸರಿ ಇದೆ.**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಹುಣಸೂರು.**